# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ಪುಲಿಕೇಶಿನಗರ ಉಪ ವಿಭಾಗ, ವಾರ್ಡ್ ನಂ.47(ದೇವರ ಜೀವನಹಳ್ಳಿ)

## ವಾರ್ಡ್ ಸಮಿತಿ ಸಭೆ, ದಿನಾಂಕ: 19-12-2020 ರ ಸಭಾ ನಡವಳ

ಸಂಖ್ಯೆ:ಸ.ಕಂ.ಅ(ಪು.ನ)/ಪಿಆರ್/06/20-21

ದಿನಾಂಕ: 19-12-2020 ರಂದು ಬೆಳ್ಳಿಗೆ 11.00 ಗಂಟೆಗೆ ವಾರ್ಡ್ ನಂ.47 ಡಿ.ಜೆ.ಹಳ್ಳಿ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಹಾಯಕ ಅಭಿಯಂತರರು ಡಿಜಿ ಹಳ್ಳಿ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಗಳು.

| ಕ್ರಮ ಸಂಖ್ಯೆ | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಹುದ್ದೆ |
|---|---|---|
| 1 | S. Vishwanatha | Nodal Officer ward No. 47 D.J Halli & Asst. Executive Engineer, Hebbal Sub-division |
| 2 | Rahul | JE BWSSB |
| 3 | Kodhandaramu | JE (Bescom) |
| 4 | Madhu | JHI Ward No. 47 |
| 5 | Nagaraj | Work Inspector Ward No 47 |
| 6 | Chandrashekar | Horticulture Dept, Supervisor |
| 7 | Suguna | Revenue Dept. |
| 8 | Nagaraj | Tax Inspector |
| 9 | A.R Suresh | Welfare Association Modi Garden |
| 10 | Natraj | Ward Member (Ward No 47) |
| 11 | Ahmad Ushen | Ward Member (Ward No 47) |
| 12 | James | Ward Member (Ward No 47) |
| 13 | Ashoka | Ward Member (Ward No 47) |
| 14 | Rajan | Ward Member (Ward No 47) |
| 15 | Purushotham | Citizen Rights Protection Form |

ಶ್ರೀ ವಿಶ್ವನಾಥ್ ಎಸ್, ನೋಡಲ್ ಅಧಿಕಾರಿ ವಾರ್ಡ್ ಸಂಖ್ಯೆ 47 ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಆದೇಶ ಸಂಖ್ಯೆ ಬಿ12(5)/ಪಿಆರ್/35/20-21, ದಿನಾಂಕ: 02.10.2020 ರ ತಿದ್ದುಪಡಿ ಕಛೇರಿ ಆದೇಶದಲ್ಲಿ ಶ್ರೀ ಎಸ್. ವಿಶ್ವನಾಥ್ ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಬ್ಬಾಳ ಉಪ ವಿಭಾಗ ರವರನ್ನು ವಾರ್ಡ್ ನಂ.47ರ ನೋಡಲ್ ಅಧಿಕಾರಿಯಾಗಿ ನೇಮಿಸಿರುವುದರಿಂದ ಸದರಿಯವರಿಗೆ ಸಮಿತಿಯ ಪರವಾಗಿ ಸ್ವಾಗತವನ್ನು ಕೋರುತ್ತಾ ಸಭೆಗೆ ಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿ/ನೌಕರರು ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡ ವಿಷಯಗಳ ಬಗ್ಗೆ ತಿಳಿಸಿದರು.

- ಸಾರ್ವಜನಿಕರು ಸಭೆಯಲ್ಲಿ ಈದ್ಗಾಮೊಹಲ್ಲಾ ಹತ್ತಿರ ನೀರು ಹರಿದು ಮನೆಗಳಿಗೆ ನುಗ್ಗುವುದನ್ನು ತಡೆಯಲು ಕಾಂಪೌಡ್ ಗೋಡೆ ನಿರ್ಮಿಸಲು ಆಗ್ರಹ ಪಡಿಸಿದ್ದು ಅದರಂತೆ ದೂರವಾಣಿ ಮುಖಾಂತರ ಸಹಾಯಕ ಕಾರ್ಯಪಾಲಕ ಅಭಿಯಂತರರು ಪುಲಿಕೇಶಿನಗರ ರವರನ್ನು ಸಂಪರ್ಕಿಸಿ ಸ್ಥಳ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.
- ವಾರ್ಡ್ ಸಂಖ್ಯೆ 47 ರ ವ್ಯಾಪ್ತಿಗೆ ಸಂಬಂಧಪಟ್ಟ ಮಾರಮ್ಮ ದೇವಾಲಯದ ಬಳಿ ಸಿಸಿ ಕ್ಯಾಮರಗಳು ಕೆಟ್ಟುಹೋಗಿದ್ದು ಇವುಗಳನ್ನು ದುರಸ್ಥಿ ಪಡಿಸಲು ಕ್ರಮ ಕೈಗೊಳ್ಳುವಂತೆ ಪಾಲಿಕೆಯ ಕಾಮಗಾರಿ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಲಾಯಿತು.
- ದೊಡ್ಡಣ್ಣ ನಗರ ಅಂಬೇಡ್ಕರ್ ಪಾರ್ಕ್ ಬಳಿ ಇರುವ ಟ್ರಾನ್ಸ್‌ಪಾರ್ಮರ್ ಇರುವ ಸ್ಥಳವನ್ನು ಪರಿಶೀಲಿಸಿ ಸಾರ್ವಜನಿಕ ಹಿತದೃಷ್ಠಿಯಿಂದ ಅಗತ್ಯ ಸುರಕ್ಷತಾ ಕಾರ್ಯ ಕೈಗೊಳ್ಳುವಂತೆ ಶ್ರೀಮತಿ ಅರುಣಾಕುಮಾರಿ, ಸಹಾಯಕ ಅಭಿಯಂತರರು ಬೆಸ್ಕಾಂ ರವರನ್ನು ದೂರವಾಣಿ ಮುಖಾಂತರ ಸಂಪರ್ಕಿಸಿ ಸೂಚಿಸಲಾಯಿತು.

- ತಂಗಮಲ್ಲೈ ನಗರ ವಿನಾಯಕ ಟಾಕಿಸ್ ಹತ್ತಿರ ಬಿಡ್ಲ್ಯೂಎಸ್ಎಸ್‌ಬಿ ನೀರಿನ ಪೈಪ್‌ಲೈನ್ ಸೋರಿಕೆಯಾಗುತ್ತಿರುವುದಾಗಿ ಸಾರ್ವಜನಿಕರು ತಿಳಿಸಿದ್ದು, ಅದರಂತೆ ಸದರಿ ಸ್ಥಳವನ್ನು ಪರಿಶೀಲಿಸಿ ದುರಸ್ಥಿ ಪಡಿಸಲು ಸಭೆಯಲ್ಲಿ ಹಾಜರಿದ್ದ ಶ್ರೀ ರಾಹುಲ್, ಕಿರಿಯ ಅಭಿಯಂತರರು ಬಿಡ್ಲ್ಯೂಎಸ್ಎಸ್‌ಬಿ ರವರಿಗೆ ಸೂಚಿಸಲಾಯಿತು.
- ಮೋದಿ ಗಾರ್ಡನ್ 3ನೇ ಅಡ್ಡ ರಸ್ತೆಯ ಹತ್ತಿರ ಬಿಡ್ಲ್ಯೂಎಸ್ಎಸ್‌ಬಿ ಸ್ಯಾನಿಟರಿ ಪೈಪ್‌ಲೈನ್ ಪದೆ ಪದೆ ಬ್ಲಾಕ್ ಆಗುತ್ತಿದ್ದು ಇದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುವುದರಿಂದ, ಸದರಿ ಸ್ಥಳವನ್ನು ಪರಿಶೀಲಿಸಿ ಹೊಸ ಪೈಪ್‌ಲೈನ್ ಅಳವಡಿಸಲು ಅಗತ್ಯ ಕ್ರಮ ಕೈಗೊಳ್ಳಲು ಈ ಬಾಗಕ್ಕೆ ಸಂಬಂಧಪಟ್ಟ ಉಸ್ತುವಾರಿ ಶ್ರೀ ದಸ್ತಗೀರ್ ಬಾಷ, ಸಹಾಯಕ ಅಭಿಯಂತರರು ಬಿಡ್ಲ್ಯೂಎಸ್ಎಸ್‌ಬಿ ರವರಿಗೆ ಸೂಚಿಸಲಾಯಿತು.
- ವಾರ್ಡ್ ಸಂಖ್ಯೆ 47ಕ್ಕೆ ಸಂಬಂಧಪಟ್ಟ ಸಾರ್ವಜನಿಕರು ಪ್ರತಿದಿನ ಬೆಳಗ್ಗೆ ಘನತ್ಯಾಜ್ಯ ನಿರ್ವಹಣೆ ಪೌರಕಾರ್ಮಿಕರು ಕಸವನ್ನು ವಿಲೇವಾರಿ ಮಾಡಿದ ನಂತರ ಬೆಳಗ್ಗೆ 11.00 ಗಂಟೆ ಸಮಯದಿಂದ ಪುನಃ ಕಸ ಸುರಿಯುತ್ತಿದ್ದು ಇದರಿಂದ ಸಾರ್ವಜನಿಕರಿಗೆ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದ್ದು ಇದನ್ನು ತಡೆಯಲು ಈ ಹಿಂದಿನ ಸಭೆಯಲ್ಲಿ ಹೆಚ್ಚುವರಿ ಮಾರ್ಷಲ್‌ಗಳನ್ನು ನೇಮಿಸಿಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಗಿತ್ತು. ಅದರೇ ಬ್ಲಾಕ್ ಸ್ಪಾಟ್‌ಗಳಲ್ಲಿ ಕಸ ಸುರಿಯುವುದನ್ನು ಪ್ರತಿದಿನ ಕಸ ವಿಲೇವಾರಿ ಆದಕೂಡಲೇ ಪುನಃ ಕಸವನ್ನು ಸುರಿಯುವವರ ವಿರುದ್ಧ ದಂಡ ವಿದಿಸಲು ಹಾಲಿ ವಾರ್ಡ್ ವ್ಯಾಪ್ತಿಯಲ್ಲಿಲ್ಲ ಕೇವಲ ಒಬ್ಬ ಮಾರ್ಷಲ್ ಮಾತ್ರ ಕಾರ್ಯನಿರ್ವಹಿಸುತ್ತಿದ್ದು, ಹೆಚ್ಚುವರಿಯಾಗಿ ಅಗತ್ಯವಿರುವ ಹೆಚ್ಚುವರಿ 04 ಮಾರ್ಷಲ್‌ಗಳನ್ನು ನೇಮಿಸಲು ಸಂಬಂಧಪಟ್ಟ ಮೇಲಾದಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಿ ಅನುಮೊದನೆ ಪಡೆದುಕೊಳ್ಳಲು ಶ್ರೀಮತಿ ಜ್ಯೋತಿ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ) ರವರಿಗೆ ದೂರವಾಣಿ ಮುಖಾಂತರ ಸಂಪರ್ಕಿಸಿ ಸೂಚಿಸಲಾಯಿತು.
- ವಾರ್ಡ್ 47 ರ ವ್ಯಾಪ್ತಿಯ ಮುನಿನಂಜಪ್ಪ ಗಾರ್ಡನ್ 1ನೇ ಅಡ್ಡ ರಸ್ತೆಯಲ್ಲಿ ಹಾಳಾಗಿರುವ ವಿದ್ಯುತ್ ತಂತಿಗಳನ್ನು ಬದಲಿಸಲು ಕ್ರಮ ಕೈಗೊಳ್ಳುವಂತೆ ಬೆಸ್ಕಾಂ ಅಧಿಕಾರಿಗಳಿಗೆ ಸೂಚಿಸಲಾಯಿತು.
- ಸಭೆಯಲ್ಲಿ ಆರೋಗ್ಯ ಇಲಾಖೆಯಿಂದ ಯಾವುದೇ ಅಧಿಕಾರಿಗಳು/ಪ್ರತಿನಿಧಿಗಳು ಹಾಜರಾಗದ ಕಾರಣ ಕೋವಿಡ್-19 ರ ವಿರಸ್ ಹರಡುವುದನ್ನು ತಡೆಯಲು ಕೈಗೊಳ್ಳಬೇಕಾದ ಮುಂಜಾಗ್ರತ ಕ್ರಮಗಳ ಬಗ್ಗೆ ಚರ್ಚಿಸಲು ಮುಂದಿನ ಸಭೆಯಲ್ಲಿ ತಪ್ಪದೇ ಹಾಜರಾಗುವಂತೆ ಸೂಚಿಸಲು ನಿರ್ಧರಿಸಲಾಯಿತು.

ಮೇಲ್ಕಂಡ ಸಮಸ್ಯೆಗಳು ಬಗ್ಗೆ ಸುದೀರ್ಘವಾಗಿ ಚರ್ಚಿಸಿ, ಸೂಚಿಸಲಾದಂತೆ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ತಮ್ಮ ವ್ಯಾಪ್ತಿತಿಯಲ್ಲಿ ಬರುವ ದುರಸ್ಥಿ ಕಾರ್ಯ/ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಕೋರಿ ನೋಡಲ್ ಅಧಿಕಾರಿ ರವರು ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಎಸ್.ವಿಶ್ವನಾಥ್)
ಅಧ್ಯಕ್ಷರು (ನೋಡಲ್ ಅಧಿಕಾರಿ)
ವಾರ್ಡ್ ಸಮಿತಿ, ವಾರ್ಡ್ ಸಂಖ್ಯೆ: 47

**ಪ್ರತಿಯನ್ನು:**

01. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
02. ಮಾನ್ಯ ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
03. ಮಾನ್ಯ ಜಂಟಿ ಆಯುಕ್ತರು (ಆರೋಗ್ಯ/ಎಸ್‌ಡಬ್ಲ್ಯೂಎಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
04. ಉಪ ಆಯುಕ್ತರು (ಪೂರ್ವ), ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
05. ಕಂದಾಯ ಅಧಿಕಾರಿ (ಪುಲಕೇಶಿನಗರ), ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
06. ಸಹಾಯಕ ಕಾರ್ಯಪಾಲಕ ಅಭಿಯಂತರರು(ಪುಲಕೇಶಿನಗರ) ಎಸ್‌ಡಬ್ಲ್ಯೂಎಂ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
07. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ, ರವರ ಅವಗಾಹನೆಗಾಗಿ ಕಳುಹಿಸಿದೆ.
08. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪುಲಕೇಶಿನಗರ) ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
09. ಸಹಾಯಕ ಅಭಿಯಂತರರು(ವಿದ್ಯುತ್/ಪುಲಕೇಶಿನಗರ) ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
10. ಕಛೇರಿ ಕಡತಕ್ಕೆ.